**ಅಧ್ಯಕ್ಷರು:** ಮಾನ್ಯ ಸಚಿವರಿಗೆ ಮೊದಲು ಉತ್ತರ ಹೇಳುವುದಕ್ಕೆ ಬಿಡಿ.

**ಶ್ರೀ ಶಿವರಾಜ್ ಎಸ್ ತಂಗಡಗಿ:** ಮಾನ್ಯ ಅಧ್ಯಕ್ಷರೆ, ಕೊಬ್ಬರಿಯನ್ನು ಖರೀದಿ ಮಾಡಲು ಸರ್ಕಾರದು 2010–11ನೇ ಸಾಲಿನಲ್ಲಿ ಕೇಂದ್ರ ಸರ್ಕಾರದು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ. ಗುಣಮಟ್ಟದ ಪ್ರತಿ ಕ್ವಿಂಟಾಲ್ ಉಂಡೆ ಕೊಬ್ಬರಿಗೆ ರೂ.ಗಳ 4,700 ಗಳನ್ನು ಘೋಷಿಸಿದೆ. ಅದರ ಪ್ರಕಾರ ಅವರು ಕೊಬ್ಬರಿಯನ್ನು ಖರೀದಿ ಮಾಡುತ್ತಾರೆ. ಮಾನ್ಯ ಕೃಷ್ಣಪ್ಪನವರು ಬೆಂಬಲ ಬೆಲೆಯನ್ನು 5000 ರೂ.ಗಳಿಗೆ ಹೆಚ್ಚಿಸಬೇಕೆಂದು ಹೇಳಿರುತ್ತಾರೆ. 4700 ರೂ.ಳಂತೆ ಕೊಬ್ಬರಿಯನ್ನು ಖರೀದಿ ಮಾಡಲು ಕೇಂದ್ರ ಸರ್ಕಾರ ಆದೇಶ ಮಾಡಿದೆ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅಪರ ಜೊತೆಯಲ್ಲಿ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳಲು ಪರಿಶೀಲನೆ ಮಾಡುತ್ತೇನೆ.

**ಅಧ್ಯಕ್ಷರು:** ಸದನವು ನಾಳೆ ಬೆಳಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 5 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ:2.7.2010ರ ಬೆಳಗ್ಗೆ 10.00 ಗಂಟೆಗೆ ಪುನ: ಸಮಾವೇಶಗೊಳ್ಳುವುದು)

**8. ಅನುಬಂಧ – ಅ:**

**ವಿಷಯ: ವೃತ್ತಿ ಆಧಾರಿತ ಕೋರ್ಸ್‌ನ ತರಗತಿಗಳು**

**31(273) ಶ್ರೀ ಗೋಪಾಲ ಭಂಡಾರಿ:**(ಕಾರ್ಕಳ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜೆ.ಓ.ಸಿ ತರಗತಿಗಳನ್ನು ಈ ಶೈಕ್ಷಣಿಕ ವರ್ಷದಿಂದ ಮುಚ್ಚಲಾಗಿದೆಯೇ

ಆ) ಅವುಗಳನ್ನು ಮುಚ್ಚುವ ಆದೇಶ ಮಾಡಲು ಕಾರಣವೇನು.

ಇ) ಶಿಕ್ಷಕರ ವರ್ಗಾವಣೆ ಮಾಡಲಾದ ಅನುಸರಿಸುತ್ತಿರುವ ಕಾಲಮಿತಿ 5 ವರ್ಷವೆ ಅಥವಾ 10 ವರ್ಷವೆ?

ಈ) ಶಿಕ್ಷಕರ ವರ್ಗಾವಣೆ ನಿಯಮ ತಿದ್ದುಪಡಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):**

ಅ) ಸರ್ಕಾರ ಸುತ್ತೋಲೆ ಸಂ.ಇಡಿ.:29. ಟಿ.ವಿ.ಇ 2010 ಬೆಂಗಳೂರು ದಿನಾಂಕ: 07.05.2010 ರನ್ವಯ ವೃತ್ತಿ ಶಿಕ್ಷಣದ ಪ್ರಥಮ ವರ್ಷದ ಕೋರ್ಸುಗಳ ದಾಖಲಾತಿಯನ್ನು 2010–11ನೇ ಸಾಲಿನಿಂದ ನಿಲುಗಡೆಗೊಳಿಸಲಾಗಿದೆ. ಆದರೆ, 2009–10ನೇ ಸಾಲಿನಲ್ಲಿ ಪ್ರಥಮ ವರ್ಷದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ದ್ವಿತೀಯ ವರ್ಷದ ಜೆ.ಓ.ಸಿ. ತರಗತಿಗಳನ್ನು ಮುಂದುವರೆಸಲಾಗಿದೆ.

ಆ) ವೃತ್ತಿ ಶಿಕ್ಷಣ ಕೋರ್ಸಗಳನ್ನು ರದ್ದುಗೊಳಿಸಲು ಪ್ರಮುಖ ಕಾರಣಗಳೆಂದರೆ:–

1) ಪ್ರಸ್ತುತ ವೃತ್ತಿ ಶಿಕ್ಷಣ ಇಲಾಖೆ ನಡೆಸುತ್ತಿರುವ ಕೋರ್ಸಗಳಿಗೆ ಮೂಲಭೂತ ಸೌಕರ್ಯಗಳು ತೃಪ್ತಿಕರವಾಗಿ ಇರುವುದಿಲ್ಲ.

2) ಈ ಕೋರ್ಸಗಳಲ್ಲಿ ತೇರ್ಗಡೆಯಾದವರಿಗೆ ಸೂಕ್ತ ಕೆಲಸಗಳು ಲಭ್ಯವಾಗುತ್ತಿರುವ ಹಾಗೂ ಕೋರ್ಸುಗಳ ಉಪಯುಕ್ತತೆ ಬಗ್ಗೆ ಮಾಹಿತಿ ಇಲ್ಲ.

3) ಇದೇ ರೀತಿಯ ಕೋರ್ಸ್‌ಗಳನ್ನು ಪಾಲಿಟೆಕ್ನಿಕ್ ಹಾಗೂ ಐಟಿಐಗಳು ಸಹ ನಿರ್ವಹಿಸುತ್ತಿವೆ.

4) ಇಂಡಿಯನ್ ಇನ್ಸ್‌ಟ್ಯೂಟ್ ಆಫ್ ಮ್ಯಾನೆಜ್‌ಮೆಂಟ್ ಬೆಂಗಳೂರು ಸಂಸ್ಥೆಯು ಸಲ್ಲಿಸಿರುವ ವರದಿಯಲ್ಲಿ ಕೋರ್ಸುಗಳನ್ನು ಮುಚ್ಚಲು ಶಿಫಾರಸ್ಸು ಮಾಡಿರುತ್ತದೆ.

5) ಡಾ: ನಯನತಾರಾ ಅವರು ಸಲ್ಲಿಸಿರುವ ಮೌಲ್ಯಮಾಪನ ವರದಿಯಲ್ಲಿ ವೃತ್ತಿ ಶಿಕ್ಷಣ ಕೋರ್ಸುಗಳ ಗುಣ ಮಟ್ಟದಲ್ಲಿ ಈವರೆಗೆ ಯಾವುದೇ ಗಮನಾರ್ಹ ಸುಧಾರಣೆಗಳು ಆಗಿದಿರುವ ಹಿನ್ನೆಲೆಯಲ್ಲಿ ಜೆ.ಓ.ಸಿ ಕೋರ್ಸುಗಳನ್ನು ಮುಚ್ಚಲು ಹಾಗೂ ಪರ್ಯಾಯವಾಗಿ ಐಟಿಐ ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ದಾಖಲಾತಿ ಮಿತಿಯನ್ನು ಹೆಚ್ಚಿಸಿ ಸರಿದೂಗಿಸಲು ಶಿಫಾರಸ್ಸು ಮಾಡಿತ್ತು. ಜೆ..ಓ.ಸಿ ಕೋರ್ಸುಗಳಿಗೆ ಅವಶ್ಯಕವಾಗಿ ಬೇಕಾದ

ಕೈಗಾರಿಕೆಗಳೊಂದಿಗೆ ಒಡಂಬಡಿಕೆ (ಟಯಪ್) ವ್ಯವಸ್ಥೆ ಇಲ್ಲದ ಕಾರಣ ಕೋರ್ಸುಗಳನ್ನು ಮುಚ್ಚಿ ಪರ್ಯಾಯ ವ್ಯವಸ್ಥೆ ಕಲ್ಪಿಸಲು ನಿರ್ಧರಿಸಿದೆ.

ಇ) ಶಿಕ್ಷಕರ ವರ್ಗಾವಣೆ ಮಾಡುವಾಗ ಅನುಸರಿಸುತ್ತಿರುವ ಕಾಲಮಿತಿ 5 ವರ್ಷ.

ಈ) ಹೌದು

**ಕಳ್ಳಬಟ್ಟಿ ದುರಂತ ಕುರಿತು.**

**32(117) ಶ್ರೀ ಮಂಜು ಎ:**(ಅರಕಲಗೂಡು) ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2009–10ನೇ ಸಾಲಿನಲ್ಲಿ ಕಳ್ಳಭಟ್ಟಿ ದುರಂತದಿಂದಾಗಿ ಸಾವನ್ನಪ್ಪಿದವರ ಸಂಖ್ಯೆ ಎಷ್ಟು:

ಆ) ಈ ದುರಂತಕ್ಕೆ ತುತ್ತಾದವರಿಗೆ ಸರ್ಕಾರದಿಂದ ಎಷ್ಟು ಪರಿಹಾರ ನೀಡಲಾಗಿರುತ್ತದೆ. (ತಾಲ್ಲೂಕುವಾರು ಪೂರ್ಣ ವಿವರವನ್ನು ನೀಡುವುದು)

**ಶ್ರೀ ಎಂ ಪಿ ರೇಣುಕಾಚಾರ್ಯ(ಮಾನ್ಯ ಅಬಕಾರಿ ಸಚಿವರು):**

ಅ) 2009–10 ನೇ ಅಬಕಾರಿ ಸಾಲಿನಲ್ಲಿ ಶಂಕಿತ ಕಳ್ಳಭಟ್ಟಿ/ನಕಲಿ ಮದ್ಯ ಸೇವನೆಯಿಂದ ಒಟ್ಟು 11 ಜನರು ಮೃತಪಟ್ಟಿರುವ ಘಟನೆ ಗಮನಕ್ಕೆ ಬಂದಿರುತ್ತದೆ.

ಆ) ನಕಲಿ ಮದ್ಯ/ಕಳ್ಳಬಟ್ಟಿ ಸಾರಾಯಿ ಸೇವನೆಯಿಂದ ನಿಧನ ಹೊಂದಿದವರಿಗೆ ಯಾವುದೇ ಪರಿಹಾರ ನೀಡಿರುವುದಿಲ್ಲ.

**ಉಪನ್ಯಾಸಕರ ಮತ್ತು ಶಿಕ್ಷಕರ ಕೊರತೆ**

**33(246) ಶ್ರೀ ಅಶ್ವಥ ಎಂ ಸಿ:**(ಚೆನ್ನಪಟ್ಟಣ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ತಾಲ್ಲೂಕಿನ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರುಗಳ ಹುದ್ದೆಗಳು ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?